ಕ್ರಮವಿದೆ. ಆದರಲ್ಲಿ ಎಲ್.ಐ.ಸಿ.ದು ಕಾರ್ಪೊರೇಷನ್‌ದು ಮತ್ತು ಸರ್ಕಾರದ್ದು ಇದೆ. ಅವರವರ ಭಾಗದ ಹಣದ ವ್ಯವಸ್ಥೆ ಆಗಬೇಕಾಗಿದೆ. ಆಕ್ಷನ್ ಸರ್ಕಾರ ಗಮನಪರಿಶೀಲಿಸುತ್ತಿದೆ.

ಶ್ರೀ ಕೆ. ಪಿ. ಶಾಂತಪ್ಪೂರ್ತಿ.—ಈಗ ಮಾನ್ಯ ಮಂತ್ರಿಗಳು ಈ ಎರಡು ಯೋಜನೆಗಳನ್ನು ಮೈಸೂರು ನಗರದಲ್ಲಿ ಮಾಡುವುದಕ್ಕೆ ಸರ್ಕಾರ ಸಹಾಯಾರ್ಥವಾಗಿದೆ ಎಂದು ಹೇಳಿದರು. ಮೈಸೂರು ನಗರದಲ್ಲಿರುವ ಸಿದ್ಧಾರ್ಥ ಬಡಾವಣೆ ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ನಾನು ಅಲ್ಲೇ ಪಾಸ ವಾಗಿದ್ದೇನೆ. ಅಲ್ಲಿ ನೀರಿನ ತೊಂದರೆ ಬಹಳವಾಗಿದೆ. ಆದ್ದರಿಂದ ಸಿದ್ಧಾರ್ಥ ಬಡಾವಣೆಯನ್ನು ಈ ಯೋಜನೆಯಲ್ಲಿ ಸೇರಿಸಿಕೊಳ್ಳುತ್ತೀರಾ ?

ಶ್ರೀ ಎಂ ಚಂದ್ರಶೇಖರ್.—ಅದೂ ಕೂಡ ಸೇರಿಸಿರಬಹುದು. ಒಂದು ವೇಳೆ ಸೇರಿಸದೇ ಇದ್ದರೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿನ ಅವ್ಯವಹಾರಗಳ ಬಗ್ಗೆ

೭೫. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) :—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವರೇ ;

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅವ್ಯವಹಾರ ನಡೆಯುತ್ತಿರುವ ಬಗ್ಗೆ, ಸರಕಾರಕ್ಕೆ ಪತ್ರದಿಗಳೇನಾದರೂ ಬಂದಿವೆಯೆ ;

ಆ) ನಿವೇಶನಗಳ ವಿತರಣೆಯಲ್ಲಿ ಕಾನೂನು ಕಟ್ಟಳೆಗಳನ್ನು ಅನುಸರಿಸದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಈ ದೂರುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

ಅ) ಈ ಬಗ್ಗೆ ಕೆಲವು ಸಾರ್ವಜನಿಕರಿಂದ ಸರ್ಕಾರಕ್ಕೆ ದೂರುಗಳು ಬಂದಿವೆ.

ಆ) ಈ ಬಗ್ಗೆ ಕೆಲವು ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಚುನಾವಣೆಗೆ ಒಂದು ತಿಂಗಳ ಮುಂಚಿನಿಂದ ನಡೆದ ಎಲ್ಲಾ ನಿವೇಶನಗಳ ವಿತರಣೆಗಳನ್ನು ಮತ್ತು ಇತರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಜ್ಞೆಗಳನ್ನು ಸ್ಥಗಿತಗೊಳಿಸಿ ಸರ್ಕಾರದ ಮುಂದೆ ತೀವ್ರವಾಗಿ ಪರಿಶೀಲನೆಯಲ್ಲಿರುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾದ ನಿವೇಶನಗಳ ಬಗ್ಗೆ

೭೬. ಶ್ರೀ ರಾಮಚಂದ್ರೇಗೌಡ (ಮಲ್ಲೇಶ್ವರ).—ಮಾನ್ಯ ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

೧. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ ೧-೧೦-೮೨ ರಿಂದ ೧೫-೧-೮೫ರ ಅವಧಿಯಲ್ಲಿ ಮಂಜೂರಾಗಿರುವ ನಿವೇಶನಗಳೆಷ್ಟು ;

೨. ಆ ನಿವೇಶನಗಳಲ್ಲಿ ಬಿಡಿ ನಿವೇಶನಗಳ ಸಂಖ್ಯೆ ಉಚಿತ ನಿವೇಶನಗಳ ಸಂಖ್ಯೆ ಸೊಂದಣಿ ಯೋಜನೆಯಡಿಯಲ್ಲಿ ಹಂಚಿದ ನಿವೇಶನಗಳ ಸಂಖ್ಯೆಗಳೆಷ್ಟು ?

೩. ಈ ಮೇಲಿನ ನಿವೇಶನಗಳನ್ನು ಹಂಚುವ ಸಮಯದಲ್ಲಿ ಪಾಲಿಸಿದ ನಿಯಮಗಳೇನು ?

೪. ನಿವೇಶನಗಳ ಹಂಚಿಕೆಯ ಸಂದರ್ಭದಲ್ಲಿ ಸಂಭವಿಸಿರುವ ಅತ್ಯಧಿಕ ಭ್ರಷ್ಟಾಚಾರ ಮತ್ತು ಪಕ್ಷಪಾತಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಜೆ. ಮೇಲಿನ ಅವಧಿಯಲ್ಲಿ ಮಾಡಲಾದ ಹಂಚಿಕೆಯನ್ನು ರದ್ದುಪಡಿಸಲು ಸರ್ಕಾರಕ್ಕೆ ಬಂದ ಒತ್ತಡಗಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?

ಟಿ. ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಪ್ರಾಧಿಕಾರದ ನಿರ್ಣಯಗಳನ್ನು ಸರ್ಕಾರವು ಕ್ರಮಬದ್ಧಗೊಳಿಸಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು).—

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವರದಿಯ ಪ್ರಕಾರ ೨,೨೨೯ ನಿವೇಶನಗಳನ್ನು ಹಂಚಲಾಗಿದೆ.

ಆ) ಬಿಡಿ ನಿವೇಶನಗಳ ಸಂಖ್ಯೆ	೨೨೫
ಉಚಿತ ನಿವೇಶನಗಳ ಸಂಖ್ಯೆ :	೨೬೮
ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ	೩೬
ಪ್ರಕಟಣೆಯಡಿಯಲ್ಲಿ ಹಂಚಿದ ನಿವೇಶನಗಳ ಸಂಖ್ಯೆ (ಚಂದ್ರಾ ಬಡಾವಣೆ)	೨೪೪
ಒಂದನೆ ಯೋಜನೆಯಡಿಯಲ್ಲಿ ಹಂಚಿದ ನಿವೇಶನಗಳ ಸಂಖ್ಯೆ	೧೪೫೬
ಒಟ್ಟು	೨೨೨೯

ಇ) ನಿವೇಶನಗಳ ಹಂಚಿಕೆ ನಿಯಮಗಳ ಪ್ರಕಾರ ಹಂಚಿಕೆ ಮಾಡಲಾಗಿದೆಯೆಂದು ತಿಳಿದು ಬಂದಿದೆ. ಇದರ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಕೆಲವು ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆ.

ಉ) ೪-೧೨-೧೯೮೨ ರಿಂದ ನಡೆದ ಎಲ್ಲಾ ನಿವೇಶನಗಳ ಹಂಚಿಕೆಯನ್ನು ಸ್ಥಗಿತಗೊಳಿಸಿ ಸರ್ಕಾರದ ಮಟ್ಟದಲ್ಲಿ ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ಊ) ಈ ಸಂಬಂಧದಲ್ಲೂ ಸಹಾ ಸರ್ಕಾರದ ಮಟ್ಟದಲ್ಲಿ ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಕೇಳಿದ ಮೊದಲನೇ ಪ್ರಶ್ನೆಗೆ ತಾವು ಕೆಲವರಿಂದ ದೂರುಗಳು ಬಂದಿವೆ ಎಂದು ಹೇಳಿದಿರಿ. ಆ ದೂರುಗಳಲ್ಲಿ ಯಾವ ಅಂಶಗಳು ಅಡಕವಾಗಿವೆ, ಯಾವ ರೀತಿ ದೂರುಗಳು ಬಂದಿದೆಯೆಂದು ಹೇಳುವುದಕ್ಕೆ ಆಗುತ್ತದೆಯೆ ?

ಶ್ರೀ ಎಂ. ಚಂದ್ರಶೇಖರ್.—ಸಾಮಾನ್ಯವಾಗಿ ಸಾರ್ವಜನಿಕರಿಂದ ನಿಯಮಗಳಿಗೆ ಅನುಸಾರವಾಗಿ ಸೈಟುಗಳ ಹಂಚಿಕೆಯಾಗಿಲ್ಲ ಎಂಬ ದೂರುಗಳು ಬಂದಿವೆ. ನಾವು ಅನೇಕ ದಿವಸಗಳಿಂದ ಸೈಟುಗಳಿಗೆ ಅರ್ಜಿ ಹಾಕಿಕೊಂಡಿರುತ್ತೇವೆ. ನಮಗೆ ಇನ್ನೂ ಬಂದಿಲ್ಲ, ಮತ್ತು ಅಲ್ಲಿ ನಿಯಮಗಳಿಗನುಸಾರವಾಗಿ ಹಂಚಿಕೆಯಾಗಿಲ್ಲ ಎನ್ನುವುದು ಅವರ ದೂರುಗಳು.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಎರಡನೇ ಪ್ರಶ್ನೆಯಲ್ಲಿ ನಿವೇಶನಗಳ ವಿತರಣೆಯಲ್ಲಿ ನಿಯಮಗಳನ್ನು ಅನುಸರಿಸದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಹೇಳಿದ್ದಕ್ಕೆ ಈ ಬಗ್ಗೆ ಕೆಲವು ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಮೊದಲನೆಯಾಗಿ ನಿಯಮಗಳಿಗೆ ವಿರುದ್ಧವಾಗಿ ಬಿಡಿಎ ನಡೆದುಕೊಂಡಿದೆ. ನಿಯಮಗಳ ವಿರುದ್ಧವಾಗಿ ಯಾರ್ಯಾರು ಅಂದರೆ ಬಿ.ಡಿ.ಎ. ಛೇರ್ಮನ್ನರು, ಕಮಿಷನರ್‌ರವರು ನಡೆದುಕೊಂಡಿದ್ದಾರೆ ಎನ್ನುವಂತಹ ದೂರುಗಳು ಬಂದಿವೆಯೇ ?

ಶ್ರೀ ಎಂ. ಚಂದ್ರಶೇಖರ್.—ಆ ರೀತಿಯಾದ ದೂರುಗಳು ನಮ್ಮ ಗಮನಕ್ಕೆ ಬಂದಿಲ್ಲ. ಆದರೆ ವಿತರಣೆ ಸಮಯದಲ್ಲಿ ಸಮರ್ಪಕವಾಗಿ, ಸರಿಯಾದ ರೀತಿಯಲ್ಲಿ ವಿತರಣೆಯಾಗಿಲ್ಲ ಎಂದು ಹೇಳಿದ್ದಾರೆ.

ಅದರ ಬಗ್ಗೆ ಸರಿಯಾದಂಥ ಪರಿಶೀಲನೆ ಆಗಬೇಕು, ಪರೀಕ್ಷೆ ಆಗಬೇಕು. ಅದಕ್ಕೋಸ್ಕರ ಅವುಗಳನ್ನು ಸ್ಥಗಿತಗೊಳಿಸಿ ಈಗ ಪರಿಶೀಲನೆಯು ಹಂತದಲ್ಲಿದೆ

ಶ್ರೀ ಎಂ. ಎಸ್. ಕೃಷ್ಣನ್.—ಸ್ಪೈಸ್ ಸೈಟುಗಳ ಬಗ್ಗೆ ದೂರುಗಳು ಸ್ಪಷ್ಟವಾಗಿ ಬಂದಿವೆಯೇ ; ಹಾಗೆ ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಸ್ಪೈಸ್ ಸೈಟುಗಳ ಹಂಚಿಕೆಯ ಬಗ್ಗೆ ಕೂಡ ಕೆಲವಾರು ದೂರುಗಳು ಬಂದಿದೆ. ಸ್ಪೈಸ್ ಸೈಟುಗಳನ್ನು ನಿಯಮಗಳ ಪ್ರಕಾರವಾಗಿ ಹಂಚಿಲ್ಲ ಮತ್ತು ಪಂಚುವುದರಲ್ಲಿ ಕೆಲವು ನ್ಯೂನತೆಗಳಾಗಿವೆ. ಹಕ್ಕುಪತ್ರಗಳನ್ನು ಕೊಡುವುದರಲ್ಲಿ ವ್ಯತ್ಯಾಸವಾಗಿದೆ ಎನ್ನುತಕ್ಕ ದೂರುಗಳು ಬಂದಿವೆ. ಅದರ ಬಗ್ಗೆ ಕೂಡ ಪರಿಶೀಲನೆ ಮಾಡುತ್ತಾ ಇದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಮುಖ್ಯ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಗುಂಡೂರಾಯರು ತಾವೇ ಹೇಳಿ ಇಂತಿಂಥ ಸೈಟುಗಳನ್ನು ಇಂತಿಂಥವರಿಗೆ ಕೊಡಬೇಕು ಎಂದು ಬಿ.ಡಿ.ಎ. ಛೇರ್ಮನ್ನರಿಗಾಗಲಿ, ಕಮಿಷನರ್‌ರವರಿಗಾಗಲಿ ಆದೇಶವನ್ನು ಕೊಟ್ಟಿದ್ದರೆ ? ಕೊಟ್ಟಿದ್ದರೆ, ಅದು ತಮ್ಮ ಗಮನಕ್ಕೆ ಬಂದಿದೆಯೇ : ಬಂದಿದ್ದರೆ ಅದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ತಮಗೆ ಗೊತ್ತಿರುವ ಹಾಗೆ ಹಿಂದೆ ಈ ಇಲಾಖೆ ಮುಖ್ಯ ಮಂತ್ರಿಗಳ ಆಡಳಿತದಲ್ಲಿತ್ತು. ಅದರಂತೆ ಮುಖ್ಯ ಮಂತ್ರಿಗಳಿಂದ ಆದೇಶ ಬಂದಿದೆ ಎನ್ನುವ ಪ್ರಕಾರವಾಗಿ ಅಲ್ಲಿ ಕೆಲವಾರು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದು ಸರಿಯೋ ತಪ್ಪೋ ಎನ್ನುವುದೂ ಕೂಡ ಪರಿಶೀಲನೆಯಲ್ಲಿದೆ.

ಶ್ರೀ ಎಂ. ವೀರಪ್ಪ ನೊಯಿಲಿ —ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಕೃಷ್ಣಸ್ವಾಮಿಯವರು ಹಿಂದಿನ ಮುಖ್ಯ ಮಂತ್ರಿಯವರು ಇಂತಹವರಿಗೆ ಸೈಟುಗಳನ್ನು ಕೊಡಬೇಕೆಂದು ಹೇಳಿದ್ದಾರೆಯೇ ಎಂದು ಕೇಳಿದರು, ಅದಕ್ಕೆ ಮಾನ್ಯ ಸಚಿವರು ಸ್ಪಷ್ಟವಾದಂಥ ಉತ್ತರವನ್ನು ಕೊಟ್ಟಿಲ್ಲ. ನನ್ನ ಪ್ರಶ್ನೆ ಇಷ್ಟೆ. ಈಗ ಬಿ.ಡಿ.ಎ ಗೆ ಸ್ಪೈಸೈಟುಗಳ ವಿಚಾರದಲ್ಲಿ ಯಾವ ವಿಧವಾದಂಥ ಡೈರೆಕ್ಷನ್ ಸರ್ಕಾರ ಕಳಿಸಿತು ? ಇದು ಒಂದನೆಯದು. ಎರಡನೆಯದು, ಬಿ.ಡಿ.ಎ. ಸ್ಪೈಸ್ ಸೈಟುಗಳನ್ನು ಮತ್ತು ೨೨೨೯ ಸೈಟುಗಳನ್ನು ಹಂಚುವಂಥ ೧೦-೧-೧೯೮೬ರಿಂದ ಬಿ.ಡಿ.ಎ. ವಿಸಿಟಿಂಗ್‌ನಲ್ಲಿ ಈಗಿನ ಸಂಪುಟದ ಸದಸ್ಯರಾದಂಥ ಶ್ರೀಮಾನ್ ಜಾಲಪ್ಪನವರು ಅಪ್ರೂವ್ ಮಾಡುವಾಗ ಇದ್ದರೆ, ಇದ್ದರೆ ಅವರು ಅದನ್ನು ಅಪ್ರೂವ್ ಮಾಡುವುದಕ್ಕೆ ಆಕ್ಷೇಪಣೆ ಏನಾದರೂ ಎತ್ತಿದ್ದರೇ ?

ಶ್ರೀ ಎಂ. ಚಂದ್ರಶೇಖರ್.—ಈ ಬಗ್ಗೆ ಆ ಕಾಲದಲ್ಲಿ ನಡೆದಂಥ ಅಂದರೆ ೪-೧೨-೧೯೮೭ ರಿಂದ ೧೦-೧-೧೯೮೬ರವರೆಗೆ ಯಾವ ಯಾವ ಪ್ರಕರಣಗಳು ನಡೆಯಿತು ಮತ್ತು ಯಾವ ತೀರ್ಮಾನಗಳನ್ನು ತೆಗೆದುಕೊಂಡಿದೆ, ಅದು ಮುಖ್ಯ ಮಂತ್ರಿಗಳ ಆದೇಶದಿಂದಲೇ ನಡೆದಿದೆಯೇ, ಅಧಿಕಾರಿಗಳ ಪತ್ರದ ಮುಖಾಂತರ ನಡೆದಿದೆಯೇ, ನಿಯಮಗಳಿಗನುಸಾರವಾಗಿ ನಡೆದಿದೆಯೇ, ಅದು ಸರ್ಕಾರದ ಆಜ್ಞೆಯೇ ಎನ್ನುವುದೂ ಕೂಡ ಪರಿಶೀಲನೆಯಲ್ಲಿದೆ. ಆದುದರಿಂದ ಅದರ ಬಗ್ಗೆ ಈಗ ಸದ್ಯಕ್ಕೆ ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರೇ ಹಿಂದಿನ ಮುಖ್ಯಮಂತ್ರಿಗಳವರು ಆದೇಶ ಕಳುಹಿಸಿದ್ದರೆಂದು ಮಾನ್ಯ ಮಂತ್ರಿಗಳವರು ಹೇಳಿದರು. ಹಾಗಿದ್ದರೆ ಆ ಆದೇಶದಲ್ಲಿ ಏನೆಂದು ಇದೆ ? ಮಾನ್ಯ ಮುಖ್ಯಮಂತ್ರಿಗಳವರು ಪಟ್ಟಿಮಾಡಿ ಕಳುಹಿಸಿ ಕೊಟ್ಟಿದ್ದಾರೆಯೇ ? ಅಥವಾ ಬಿ. ಡಿ. ಎ ನವರು ಸ್ಪೈ ಸೈಟ್‌ಗಳನ್ನು ಹಂಚಿದ ಮೇಲೆ ಸರ್ಕಾರಕ್ಕೆ, ಹಂಚಿಕೆಯಾಗಿರತಕ್ಕವರ ಲಿಸ್ಟ್‌ನ್ನು ಕಳುಹಿಸಿದರೆ ಸಾಕು ಎಂದು ಹೇಳಿ ಆದೇಶವನ್ನೇ ನಾದರೂ ಕೊಟ್ಟಿದ್ದಾರೆಯೇ ? ಇಲ್ಲ ಆ ಸ್ಪೈ ಸೈಟ್‌ಗಳನ್ನು ಹಂಚಿಕೆ ಮಾಡಿರತಕ್ಕದ್ದು ಸರ್ಕಾರದವರೇ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನೀಡಬೇಕು, ಇಲ್ಲದಿದ್ದರೆ ಸಂಶಯದ ಉಯ್ಯಾಲೆಯಲ್ಲಿ ಪ್ರಶ್ನೆಯನ್ನು ಇಟ್ಟು ಬಿಟ್ಟರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಅದು ಮಾನ್ಯ ಮುಖ್ಯಮಂತ್ರಿಗಳವರ ಆದೇಶದ ಮೇಲೆ ಅವರ ಅಧೀನ ಕಾರ್ಯದರ್ಶಿಗಳು ಸ್ಪೈ ಸೈಟ್‌ಗಳ ಬಗ್ಗೆ ಒಂದು ಪಟ್ಟಿಯನ್ನು ಕಳುಹಿಸಿ ಇಂಥವರಿಗೆ ಹಂಚಬಹುದು ಎನ್ನುವ ಬಗ್ಗೆ ಪತ್ರವನ್ನು ಕಳುಹಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಲಿಸ್ಟ್ ಕಳುಹಿಸಿದ್ದಾರೆಂದು ಹೇಳುತ್ತಿದ್ದೀರಿ, ಆದರೆ ಬಿ.ಡಿ.ಎ. ನವರು ಸೈಟ್ ಸೈಟ್‌ಗಳನ್ನು ಆ ರೀತಿಯಾಗಿ ಹಂಚುವುದಕ್ಕೆ ತಯಾರು ಇದ್ದರೋ ಇಲ್ಲವೋ ಎನ್ನುವ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಯಾರು ಲಿಸ್ಟ್‌ನ್ನು ಕಳುಹಿಸಿದ್ದರು, ಎನ್ನುವ ಬಗ್ಗೆ ಎಲ್ಲಾ ಸರಿಯಾದ ತಿಳುವಳಿಕೆಯನ್ನು ಈ ಸಭೆಗೆ ನೀಡಬೇಕು ಇಲ್ಲದಿದ್ದರೆ ಸಂಶಯದ ಸುಳಿಯಲ್ಲಿ ನಮ್ಮನ್ನೆಲ್ಲಾ ತಳ್ಳಿದ ಹಾಗಾಗುತ್ತದೆ.

ಶ್ರೀ ಎಂ. ಎಸ್ ಕೃಷ್ಣನ್.—ನಾನು ಕೇಳಿದ್ದೂ ಕೂಡ ಅದನ್ನೇ. ಮುಖ್ಯಮಂತ್ರಿಗಳವರು ಏನಾದರೂ ಇಂಥಿಂಥವರಿಗೆ ಸೈಟ್‌ಗಳನ್ನು ಕೊಡಬೇಕು ಎಂದು ಏನಾದರೂ ನಿರ್ದೇಶನವನ್ನು ಕೊಟ್ಟಿದ್ದರೆ ? ಇದಕ್ಕೆ ಮಾನ್ಯ ಮಂತ್ರಿಗಳವರು ಹೌದು ಎಂದು ಉತ್ತರದಲ್ಲಿ ಹೇಳಿದರು. ಆದುದರಿಂದ ಇದರ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಂಡು ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಎಂ. ಚಂದ್ರಶೇಖರ್.—ಮುಖ್ಯಮಂತ್ರಿಗಳವರೇ ಪಟ್ಟಿ ಕಳುಹಿಸಿ ಅದರ ಪ್ರಕಾರವಾಗಿಯೇ ಹಂಚಬೇಕೆಂದು ಏನೂ ಕಳುಹಿಸಿಲ್ಲ. ಇದನ್ನು ಬಿ.ಡಿ.ಎ.ನವರೇ ಹಂಚಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಚಿವ ಸಂಪುಟದ ಸದಸ್ಯರಾಗಿರತಕ್ಕ ಶ್ರೀ ಆರ್. ಎಲ್. ಜಾಲಪ್ಪನವರು ಆವತ್ತಿನ ದಿವಸ ಬಿ.ಡಿ.ಎ. ಸದಸ್ಯರೂ ಆಗಿದ್ದರು. ಈ ರೀತಿಯಾಗಿ ಸೈಟ್‌ಗಳನ್ನು ಹಂಚುವುದಕ್ಕೆ ಅವರು ಅಪ್ರೂವ್ ಮಾಡಿದ್ದರೆ ? ೨೨೨೯ ಸೈಟ್‌ಗಳನ್ನು ಆವತ್ತಿನ ದಿವಸ ಹಂಚಿದ್ದಾರೆ. ಆದರಲ್ಲಿ ಮಾನ್ಯ ಸಚಿವರೂ ಸಹ ಭಾಗವಹಿಸಿದ್ದರೇ ; ಅಥವಾ ಇಲ್ಲವೇ ; ಇಲ್ಲದಿದ್ದರೆ ಅದರ ಬಗ್ಗೆ ಡಿಸೆಂಟ್ ನೋಟ್ ಕೊಟ್ಟಿದ್ದರೆ ಎನ್ನುವ ಬಗ್ಗೆ ಸ್ಪಷ್ಟೀಕರಣವಾಗಬೇಕಾಗಿದೆ.

ಶ್ರೀ ಎಂ. ಚಂದ್ರಶೇಖರ್.—ಆವತ್ತಿನ ದಿವಸ ಸಭೆಯಲ್ಲಿ ಯಾರು ಯಾರು ಹಾಜರಾಗಿದ್ದರು ಎನ್ನುವ ಬಗ್ಗೆ ಪಟ್ಟಿ ತೆಗೆಸಿ ನೋಡಿ ಆಮೇಲೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸನ್ಮಾನ್ಯ ಅಧ್ಯಕ್ಷರೇ, ಈ ಬಿ. ಡಿ ಎ. ಸೈಟ್ ಸೈಟ್‌ಗಳ ಹಂಚಿಕೆಯ ವಿಚಾರದಲ್ಲಿ ಸಾರ್ವಜನಿಕರಲ್ಲಿ ಜಿಜ್ಞಾಸೆ ಬಹಳ ಇದೆ. ಇದರಲ್ಲಿ ರೂಲ್ಸ್ ಪ್ರಕಾರವಾಗಿ ಹಂಚಿಕೆ ಆಗಿದೆಯೋ ಇಲ್ಲವೋ ಎನ್ನುವ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಕೊಡತಕ್ಕಂಥದ್ದು ಸರ್ಕಾರದವರ ಕರ್ತವ್ಯವಾಗಿದೆ. ಒಂದು ಪ್ರಶ್ನೆಗೆ ಎಲ್ಲಾ ಮಾಹಿತಿಯನ್ನು ಕೊಡತಕ್ಕಂಥದ್ದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಸರ್ಕಾರದ ಉದ್ದೇಶವೇನೆಂದರೆ ಅದರ ಬಗ್ಗೆ ಒಂದು ಶ್ವೇತಪತ್ರವನ್ನು ತಯಾರು ಮಾಡುತ್ತಿದ್ದೇವೆ ; ಅದನ್ನು ಆನಂತರ ಈ ಸದನದ ಮುಂದಿಡುತ್ತೇವೆ.

ಶ್ರೀ ಪಿ. ರಾಮದೇವ್.—ಮಾನ್ಯ ಮುಖ್ಯಮಂತ್ರಿಗಳವರು ಇದರ ಬಗ್ಗೆ ಒಂದು ಶ್ವೇತಪತ್ರವನ್ನು ಸದನದ ಮುಂದಿಡುತ್ತೇನೆಂದು ಹೇಳಿದ್ದಾರೆ ಬಹಳ ಸಂತೋಷ. ತಾ॥ ೧೦-೧-೮೩ರಂದು ಕರೆದ ಸಭೆ ಮುಂದುವರಿದ ಸಭೆಯೇ ; ಅಥವಾ ಕೋರಿಕೆಯ ಸಭೆಯೇ ? ಕೋರಿಕೆಯ ಸಭೆಯಾಗಿದ್ದರೆ ಅದರಲ್ಲಿ ಯಾವ ಯಾವ ಸದಸ್ಯರು ಭಾಗವಹಿಸಿದ್ದರು ; ಆ ಸಭೆಯಲ್ಲಿ ಎಷ್ಟು ನಿವೇಶನಗಳನ್ನು ಹಂಚಿದ್ದಾರೆ ಎನ್ನುವುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಎಂ. ಚಂದ್ರಶೇಖರ್.—ಅದಕ್ಕೆ ನೋಟೀಸ್ ಬೇಕಾಗುತ್ತದೆ.

ಶ್ರೀ ಪಿ. ರಾಮದೇವ್.—ತಾ॥ ೧೦-೧-೮೩ರಂದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಆವತ್ತಿನ ದಿವಸವೇ ಮುಖ್ಯಮಂತ್ರಿಗಳವರು ಪ್ರಮಾಣ ವಚನ ಸ್ವೀಕಾರ ಮಾಡುವ ಕೆಲಸ ನಡೆದಿದ್ದರೆ ಅಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿಯಾಗತಕ್ಕಂಥ ಸಭೆ ನಡೆಯುತ್ತಿತ್ತು. ಆದುದರಿಂದ ನಾನು ಕೇಳುತ್ತಿರುವುದು ಏನೆಂದರೆ ಅದು ಅಡ್ಜರ್ನ್‌ಡ್ ಮೀಟಿಂಗೇ ಅಥವಾ ರೆಗ್ಯುಲರ್ ಮೀಟಿಂಗೇ ? ಆ ಸಭೆಯಲ್ಲಿ ಎಷ್ಟು ನಿವೇಶನಗಳ ಹಂಚಿಕೆಯಾಯಿತೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಅದು ಅಡ್ಜರ್ನ್‌ಡ್ ಮೀಟಿಂಗ್.

ಶ್ರೀ ಪಿ. ರಾಮದೇವ್.—ಸ್ವಾಮಿ, ಈ ನಿವೇಶನ ಹಂಚತಕ್ಕದರಲ್ಲಿ ಹಿಂದಿನ ಮುಖ್ಯಮಂತ್ರಿಗಳ ಕೈವಾಡವಿದೆ ಎನ್ನತಕ್ಕದ್ದು ನಿಜವೇ ?

ಉಪಾಧ್ಯಕ್ಷರು.—ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಶ್ವೇತಪತ್ರವನ್ನು ಇಡುತ್ತೇವೆಂದು ಹೇಳಿದ್ದಾರೆ.

ಶ್ರೀ ಪಿ. ರಾಮದೇವ್.—ಅಂದಿನ ಮುಖ್ಯಮಂತ್ರಿಗಳವರ ಅಡಿಷನಲ್ ಸೆಕ್ರೆಟರಿಯವರಾದ ಶ್ರೀ ಪಾಂಡೆಯವರು ಬಿ.ಡಿ.ಎ. ರವರಿಗೆ ಕಾಗದ ಬರೆದಿದ್ದಾರೆ ; ನಿಜವೇ ?

ಶ್ರೀ ಎಂ. ಚಂದ್ರಶೇಖರ್.—ಅದರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಲಾಗುತ್ತಿದೆ. ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ಇಷ್ಟು ಮಾತ್ರ ಹೇಳುವುದೇನೆಂದರೆ ಈ ವಿಷಯದಲ್ಲಿ ಸಾರ್ವಜನಿಕರಿಂದ ವಿಶ್ವಾಸವನ್ನು ಗಳಿಸತಕ್ಕ ರೀತಿಯಲ್ಲಿ ಮತ್ತು ಸರ್ಕಾರಕ್ಕೂ ಗೌರವವನ್ನು ಉಳಿಸಿಕೊಳ್ಳತಕ್ಕ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ ಹಾಗೆ ಇದರ ಬಗ್ಗೆ ಒಂದು ಶ್ವೇತಪತ್ರವನ್ನು ಕೊಡುವವರಿದ್ದೇವೆ.

ಶ್ರೀ ಏ. ಎಸ್. ಕೃಷ್ಣನ್.—ಶ್ವೇತ ಪತ್ರವನ್ನು ಹೊರಡಿಸುತ್ತೇವೆಂದು ಹೇಳಿದ್ದಾರೆ ಬಹಳ ಸಂತೋಷ. ಆದರೆ ಅಲ್ಲಿ ಹಿಂದಿನ ಮುಖ್ಯಮಂತ್ರಿಗಳವರು ಇಂಥಿಂಥವರಿಗೇ ಸೈಟ್‌ಗಳನ್ನು ಕೊಡಬೇಕು ಎಂದು ಹೇಳಿದ್ದರೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಕೂಡ ವಿಚಾರಣೆ ಮಾಡಿ ತಿಳಿಸುತ್ತೀರಾ? ಮತ್ತೆ ಮುಖ್ಯಮಂತ್ರಿಗಳವರ ಆದೇಶದ ಮೇಲೆ ಮುಖ್ಯ ಕಾರ್ಯದರ್ಶಿಯವರು ಇಂಥಿಂಥವರಿಗೇ ಕೊಡಬೇಕು ಎಂದು ಚೀಟಿಗಳನ್ನು ಕಳುಹಿಸಿದ್ದಾರೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಇದೆಲ್ಲವನ್ನೂ ಸೇರಿಸಿ ಪರೀಕ್ಷೆ ಮಾಡಬೇಕಲ್ಲಾ, ಆದುದರಿಂದ ಎಲ್ಲವನ್ನೂ ಸಹ ಸೇರಿಸಿ ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ ಮಾನ್ಯ ಟ್ರೆಜರಿ ಬೆಂಚಿನವರೇ ಬಹಳ ಮುಖ್ಯವಾದ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ತಾ॥ ೧೦-೧-೮೫ರಂದು ಮಾನ್ಯ ಮುಖ್ಯಮಂತ್ರಿಗಳವರು ಪ್ರಮಾಣ ವಚನ ಸ್ವೀಕಾರ ಮಾಡುತ್ತಿರಬೇಕಾದರೆ ಅಲ್ಲಿ ಬಿ.ಡಿ.ಎ. ಸಭೆಯಲ್ಲಿ ಈಗಿನ ಸಚಿವರಾಗಿರತಕ್ಕ ಶ್ರೀ ಆರ್. ಎಲ್. ಜಾಲಪ್ಪನವರು ಕೂತುಕೊಂಡು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದಲ್ಲಿ ಭಾಗಿಯಾಗಿದ್ದರು ಎನ್ನುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಇದರ ಬಗ್ಗೆ ಸ್ಪಷ್ಟೀಕರಣ ಬೇಕಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರವರು ಶ್ರೀ ಪಿ. ರಾಮದೇವ್‌ರವರ ಪ್ರಶ್ನೆಯನ್ನು ಹಿರಿಯಾಗಿ ಅರ್ಥಮಾಡಿಕೊಳ್ಳದೇ ಇನ್ನೊಂದು ಅರ್ಥವನ್ನು ಕೊಡುತ್ತಿದ್ದಾರೆ. ಸನ್ಮಾನ್ಯ ಶ್ರೀ ಆರ್. ಎಲ್. ಜಾಲಪ್ಪನವರ ಹೆಸರನ್ನು ತೆಗೆದುಕೊಂಡು ಹೇಳಲಿಲ್ಲ, ನೀವು ಅದಕ್ಕೊಂದು ಅರ್ಥವನ್ನು ಕೊಡುತ್ತಿದ್ದೀರಿ. ಬಿ. ಡಿ. ಎ. ನಲ್ಲಿ ಭ್ರಷ್ಟಾಚಾರ ಆಗಿದೆಯೆಂದು ಅವರು ಹೇಳಿದ್ದಾರೆ, ಅದರ ಬಗ್ಗೆ ಮುಖ್ಯಮಂತ್ರಿಗಳವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರೂ ಆವತ್ತಿನ ಸಭೆಯಲ್ಲಿ ಹಾಜರಾಗಿರುವುದರಿಂದ ಅವರೂ ಅದಕ್ಕೆ ಭಾಗಿಯಾಗಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಭ್ರಷ್ಟಾಚಾರದ ಬಗ್ಗೆ ಒಬ್ಬ ಸಚಿವರ ಮೇಲೆ ಹೇಳುತ್ತಿದ್ದೀರಿ ಹಾಗಿದ್ದರೆ ಅದರ ಬಗ್ಗೆ ನೋಟೀಸ್ ಕೊಡಿ. ಹಾಗೆಲ್ಲಾ ನೋಟೀಸ್ ಇಲ್ಲದೆ ಒಬ್ಬ ಸದಸ್ಯರ ಮೇಲೆ ಮಾತನಾಡುವ ಹಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಶ್ರೀ ಆರ್. ಎಲ್. ಜಾಲಪ್ಪನವರೂ ಸಹ ಸಭೆಯಲ್ಲಿ ಹಾಜರಾಗಿದ್ದರು. ಆದುದರಿಂದ ಇದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಸಾರ್ವಜನಿಕರಿಗೂ ಹಾಗೂ ಈ ಸದನಕ್ಕೂ ತಾವು ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ. ನಾನು ಏನೂ ಅವರ ಮೇಲೆ ಆಪಾದನೆ ಮಾಡುತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದಿನ ಮುಖ್ಯಮಂತ್ರಿಗಳವರ ಮೇಲೆ ಹೇಳಿದ್ದಾರೆ ಆದುದರಿಂದ ಅದೆಲ್ಲಾ ಪರಿಶೀಲನೆಯಾಗುತ್ತದೆ, ಹಾಗೆಂದರೆ ಅದರಲ್ಲಿ ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರೂ ಸಹ ಭಾಗಸ್ಥರು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಮಾಜಿ ಅರ್ಥ ಮಂತ್ರಿಗಳು ಬಹಳ ಚಾಕಚಕ್ಯತೆಯಿಂದ ನನ್ನ ಹೆಸರು ತಂದಿದ್ದಾರೆ. ತಾವು ಅನುಭವಸ್ಥರು. ತಮಗೆ ಭ್ರಷ್ಟಾಚಾರ ಚನ್ನಾಗಿ ಗೊತ್ತಿದೆ, ನನಗೆ ಗೊತ್ತಿಲ್ಲ. ಅದರಲ್ಲೇನಾದರೂ ನನ್ನ ಭ್ರಷ್ಟಾಚಾರ ಇದ್ದರೆ ನಾನು ಮಂತ್ರಿ ಪದವಿಯನ್ನು ಬಿಟ್ಟು ಹೋಗುತ್ತೇನೆ, ಸುಮ್ಮನೆ ಏತಕ್ಕೆ ಮಾತನಾಡುತ್ತಿದ್ದೀರೆಂದು ಅರ್ಥವಾಗುವುದಿಲ್ಲ. ನಾನು ಎಕ್ಸ್‌ಪೋಸ್ ಮಾಡುವುದಾದರೆ ಏನಾಗುತ್ತದೆಂದು ಗೊತ್ತಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮಾಡಿ, ಮಾಡಲೇಬೇಕು, ಮುಚ್ಚುಮರೆ ಏತಕ್ಕೆ ಮಾಡುತ್ತೀರಿ ?

ಒಬ್ಬರು ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಗಳು ಮುಖ್ಯವಾಗಿ ಭ್ರಷ್ಟಾಚಾರದ ಪ್ರಶ್ನೆ ಎತ್ತಿದ್ದಾರೆ. ಭ್ರಷ್ಟಾಚಾರವನ್ನು ಮಂತ್ರಿಗಳೇ ಮಾಡಲಿ ಅಥವಾ ಬೇರೆ ಯಾರೇ ಮಾಡಲಿ ಅದು ರಾಜ್ಯದ ಪ್ರಶ್ನೆಯಾಗುತ್ತದೆ. ಆದ್ದರಿಂದ, ವಿಷಯವನ್ನು ಎಕ್ಸ್‌ಪೋಸ್ ಮಾಡದೆ ಮಂತ್ರಿಗಳಾಗಲೀ ಸದಸ್ಯರಾಗಲೀ ಬಚ್ಚಿಟ್ಟರೆ ರಾಜ್ಯಕ್ಕೆ ಮೋಸ ಮಾಡಿದಂತಾಗುತ್ತದೆ. ಆದಕಾರಣ ಮಂತ್ರಿಗಳು ಎಕ್ಸ್‌ಪೋಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—ಮುಖ್ಯ ಮಂತ್ರಿಗಳು ಶ್ವೇತಪತ್ರವನ್ನು ಹೊರಡಿಸುವುದಾಗಿ ಹೇಳಿದ್ದಾರೆ ನನ್ನ ಮೇಲೆ ಏನಾದರೂ ಆಪಾದನೆ ಇದ್ದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ನಡೆದಾಗ ನಾನು ಇದ್ದೆನು ಎಂದು ವಿರೋಧ ಪಕ್ಷದ ನಾಯಕರು ಸೂಕ್ಷ್ಮವಾಗಿ ಹೇಳಿದ್ದಾರೆ. ಅದನ್ನು ಸಾಬೀತು ಮಾಡಿ ಕಣ್ಣೆದುರಿಗೆ ಇಡಿ ಎಂದು ನಾನು ಅವರನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮುಖ್ಯ ಮಂತ್ರಿಗಳು ಶ್ವೇತಪತ್ರವನ್ನು ಏನು ಹೊರಡಿಸುವುದಾಗಿ ಹೇಳಿದ್ದಾರೆ ಅದು ಬರುವವರೆಗೆ ಸ್ವಲ್ಪ ಸುಮ್ಮನಿದ್ದರೆ ಒಳ್ಳೆಯದು. ಅದು ಬರಲಿ, ಬಂದಮೇಲೆ ಇಡುವುದು ಮಾಡುವುದು ಮತ್ತೊಂದಕ್ಕೆ ನಾವು ಸಹಕಾರ ಕೊಡುತ್ತೇವೆ. ಆದರೆ ರಾಮದೇವ್ ಏನು ಹೇಳಿದರು ಎಂದರೆ ಈ ಕಡೆ ಶ್ರೀ ರಾಮಕೃಷ್ಣ ಹೆಗಡೆಯವರು ಪ್ರತಿಜ್ಞಾ ವಿಧಿ ಸ್ವೀಕಾರ ಮಾಡುತ್ತಿದಾಗ ಅಲ್ಲಿ ಮೀಟಿಂಗ್ ನಡೆಸಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಸುತ್ತಿದ್ದರು ಎಂದು. ಆದಕ್ಕಿಂತ ಮೊದಲೇ ಜಾಲಪ್ಪನವರು ಬಿ.ಡಿ.ಎ. ಸದಸ್ಯರಾಗಿದ್ದು ೧೦ನೇ ತಾರೀಖು ನಡೆದ ಮೀಟಿಂಗ್‌ನಲ್ಲಿ ಹಾಜರಿದ್ದರು ಎಂಬುದಕ್ಕೆ ದಾಖಲೆ ಇದೆ. ಹಾಗಿದ್ದಮೇಲೆ ಅವರ ವ್ಯಕ್ತಿತ್ವದ ಮೇಲೆ ರಿಫ್ಲೆಕ್ಷನ್ ಆಗುತ್ತದೆ. ಆದ್ದರಿಂದ ಈಗ ಅವರು ಆ ಪ್ರಶ್ನೆ ಎತ್ತುವುದು ತಪ್ಪು.

ಶ್ರೀ ಪಿ. ರಾಮದೇವ್.—ಆವತ್ತು ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯುವ ದಿವಸ ಜಾಲಪ್ಪನವರು ಮಂತ್ರಿಗಳಾಗಿರಲಿಲ್ಲ. ಆದು ಅವರು ಬಿ.ಡಿ.ಎ. ಸದಸ್ಯರಾಗಿದ್ದರು. ಬಿ.ಡಿ.ಎ. ಅಧ್ಯಕ್ಷರಾದ ಕೆ.ಕೆ. ಮೂರ್ತಿಯವರ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದು ಆಪಾದನೆ ಮಾಡಿದ್ದಾರೆ.

MR. DEPUTY SPEAKER.—Question hour is over.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಹಾಗೂ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಅಧ್ಯಕ್ಷರೇ ಚುಕ್ಕೆ ಗುರುತಿಲ್ಲದ ೫೯ ಪಟ್ಟಿ ಪ್ರಶ್ನೆಗಳು ಮತ್ತು ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಅನುಮತಿ ಕೊಟ್ಟರೆ ಒಂದು ಪ್ರಶ್ನೆ ಎತ್ತುತ್ತೇನೆ. ನಾನು ರೂಲ್ ೩೩೪ರ ಪ್ರಕಾರ ಒಂದು ಗಂಭೀರವಾದ ಪ್ರಶ್ನೆಯನ್ನು ಎತ್ತಬೇಕೆಂದಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್.—ಪಟ್ಟಿಯಲ್ಲಿ ಇನ್ನೂ ಪ್ರಶ್ನೆಗಳು ಇವೆ. ನಾವು ಪ್ರಶ್ನೆಗಳನ್ನು ಹಾಕಿದ ಉದ್ದೇಶವಾದರೂ ಏನು ? ಸದನದ ಹಕ್ಕನ್ನು ಚ್ಯುತಿ ಮಾಡುವುದು ಸರಿಯಲ್ಲ. ದಯವಮಾಡಿ ಮುಂದಿನ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಡಿ.

(ಮುಂದಲ)